ಕೊಡವಿಕೊಂಡ ತಲೆಯಲ್ಲಿ ಮತ್ತೆ ನಿರಾಶೆಯ ಉನ್ಮಾದ. ಮತ್ತೊಮ್ಮೆ ಭ್ರಮಾ ಲೋಕಕ್ಕೆ ಇಳಿದ ಮನಸ್ಸು. ಮುಖದ ಮುಂದೆ ಚಿಟಿಕೆ ಹೊಡೆದು ನಿಂತ.

'ಕಿರಣ, ಸುಮ್ನೆ ತೊಂದ್ರೆ ಕೊಡ್ಬೇಡ. ನಡಿ ಒಳಗೆ' ಜನರ ಗಮನ ಬೇರೆಲ್ಲೋ ಇತ್ತು. ಕಿರಣನ ತಲೆಯಲ್ಲಿ ಭ್ರಾಮಾ ಲೋಕವನ್ನು ನೋಡುವ ಕಾತುರ. ಮುಂದಡಿಯಿಟ್ಟವಳನ್ನು ನಿಲ್ಲಿಸಿದ.

'ಸತ್ಯ ಹೇಳು, ತಲೆಯಲ್ಲಿ ಕೊರೆಯುತ್ತಿರೋದೇನು?' ಅನಿರೀಕ್ಷಿತ ಪ್ರಶ್ನೆಗೆ ತತ್ತರಿಸಿದವಳು ಕಿರಣನ ಬಲಗಡೆಯ ಬಾಹುವನ್ನು ಗಟ್ಟಿಯಾಗಿ ಹಿಡಿದುಕೊಂಡಳು.

'ನಿನ್ನ ಪ್ರಶ್ನೆ ಅರ್ಥವಾಗ್ತಿಲ್ಲ. ಭ್ರಮಾಲೋಕ ಅಂತೀಯಾ; ತಲೆಯಲ್ಲಿ ಹುಳ ಕೊರೆದಂತಿದೆ ಅಂತೀಯಾ' ಅವನ ಕಣ್ಣುಗಳಲ್ಲಿ ಕಂಡಿರಬಹುದಾದ ವಿಷಯವನ್ನು ಹುಡುಕಲು ಪ್ರಯತ್ನಿಸಿದಳು. ಸಂಪೂರ್ಣವಾಗಿ ಅವಳನ್ನು ತನ್ನತ್ತ ಸೆಳೆದುಕೊಂಡ.

'ನಾನು ನಿನ್ನ ಗಮನಿಸ್ತಾ ಇದ್ದೆ. ನಿನ್ನ ಜೊತೆ ಮಾತಾಡ್ತಿದ್ದೋನು ಯಾರು?' ಪಿಸು ದನಿಯಲ್ಲಿ ಕೇಳಿದ.

ಮೇನಕಾಳ ಕಣ್ಣುಗಳಲ್ಲಿ ಭೀತಿಯ ನೆರಳು ದಟ್ಟವಾಯಿತು. ಕಿರಣನಿಂದ ಸತ್ಯ ಮುಚ್ಚಿಡುವ ದಾರಿ ಕಾಣದಾಯಿತು.

'ಅದು... ಅದು...' ಮಾತುಗಳು ಅರ್ಧಕ್ಕೆ ನಿಂತವು.

ಹಜಾರದಲ್ಲಿ ತುಂಬಿದ್ದ ಜನರ ಲೋಕ ಬೇರೆಯದ್ದೇ ಆಗಿತ್ತು.

'ಯಾಕೆ ತಡವರಿಸ್ತೀಯಾ, ಹೇಳ್ಬಿಡು' ಒತ್ತಾಯಿಸಿದವನು ಅವಳನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದ.

'ನೋ! ಕಿರಣ, ನನ್ನ ಬಿಟ್ಬಿಡು. ಪಾರ್ಟಿ ಮುಗೀಲೀ ಆಮೇಲೆ ಹೇಳ್ತೀನಿ' ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದಳಾದರೂ ಕಿರಣನ ಹಿಡಿತ ಬಿಗಿಯಾಗಿತ್ತು.

'ನಿಜ ಹೇಳು ಮೇನಕಾ, ನಿನ್ನ ಜೊತೆ ಮಾತಾಡ್ತಿದ್ದೋನು ಯಾರು?' ಗಂಭೀರವಾಗಿತ್ತು ಪ್ರಶ್ನೆ.

ಕಿರಣನ ಕಣ್ಣುಗಳನ್ನೇ ದಿಟ್ಟಿಸಿದಳು. ಹಠ ಬಿಡಲಾರದವನಂತೆ ಅವನ ನೋಟವಿತ್ತು. ತಲೆ ತಗ್ಗಿತು. ಮಾತು ಹೊರಟಿತು.

'ಚಿಕ್ಕಮ್ಮನ ದೂರದ ಸಂಬಂಧಿ' ಮುಖದಲ್ಲಿ ಗಾಢವಾದ ಬದಲಾವಣೆ ಕಂಡಿತು. ಅವಳನ್ನು ಹಿಡಿದ ಬಿಗಿತ ಸಡಿಲಿಸಿತು. ಬೋನಿನಿಂದ ಹೊರಗೆ ಬಿಟ್ಟ ಮೊಲದಂತೆ ಯಾವ ಕಡೆಗೆ ಹೋಗಬೇಕೆಂದು ತಿಳಿಯದೆ ಅಲ್ಲೇ ನಿಂತಂತಿತ್ತು ಅವಳ ಸ್ಥಿತಿ.

'ಚಿಕ್ಕಮ್ಮನ ದೂರದ ಸಂಬಂಧಿಯಾದರೂ ಪಾರ್ಟಿಗೆ ಆಹ್ವಾನವಿರಲಿಲ್ಲ. ಅಲ್ಲವೆ?' ಆಶ್ಚರ್ಯವಿತ್ತು ಕಿರಣನ ಪ್ರಶ್ನೆಯಲ್ಲಿ. ಮೆನಕಾಳ ಮುಖದಲ್ಲಿ ಸಿಟ್ಟು ಕಂಡಿತು.

'ಕಂಡ ಕಂಡೋರನ್ನ ಆಹ್ವಾನಿಸೋದಿಕ್ಕೆ ಈ ಪಾರ್ಟಿ ನಡೆಸ್ತಿರೋದು ನಾನು, ನನ್ನ ಚಿಕ್ಕಮ್ಮ ಅಲ್ಲ. ನಂಗೆ ಆ ಹೆಂಗಸಿನ ಮೇಲೆ ಅನುಮಾನವಿತ್ತು. ಅದಕ್ಕೆ ಪಾರ್ಟಿಗೆ ಇಳಿದು ಬರದ ಅವರನ್ನು ನೋಡೋದಿಕ್ಕೆ ನಾನು ಮೆಟ್ಟಿಲೇರುತ್ತಿದ್ದೆ. ಅಷ್ಟರಲ್ಲಿ ಶನಿಯ ಹಾಗೆ ನೀನು ನನ್ನ ಹಿಡ್ಕೊಂಡು ಬಿಟ್ಟೆ. ಇಷ್ಟಕ್ಕೂ ನಿಂಗೂ ಪಾರ್ಟಿಗೆ ಆಹ್ವಾನವಿರಲಿಲ್ಲ ಅನ್ನೋದನ್ನ ಮರೀಬೇಡ'

ಮೇನಕಾಳ ಮಾತಿಗೆ ಗಹಗಹಿಸಿ ನಕ್ಕ. ಒಳಗಿನ ಬಣ್ಣದ ಬೆಳಕಿಗೆ ಅವಳ ಮುಖದ ಸಿಟ್ಟು ಇನ್ನಷ್ಟು ತೀವ್ರಗೊಂಡಿತು. ತಾಳ್ಮೆ ಕೆಟ್ಟಿತು. ಕಿರಣನ ಎದೆಗೆ ಕೈಯಿಟ್ಟು ಬಲವಾಗಿ ತಳ್ಳಿದಳು. ಕಿರಣ ತತ್ತರಿಸಿ ಹಿಂದಕ್ಕೆ ಜಗಿದ. ಕಿಟಕಿಯ ಗಾಜು ತಲೆಯನ್ನು ಬಲವಾಗಿ ತಾಡಿತು. ಸಣ್ಣ ಚೀತ್ಕಾರದೊಂದಿಗೆ ನಗು ನಿಲ್ಲಿಸಿದ. ಮೇನಕಾ ಆತಂಕದ ಕೂಗು ಹಾಕಿದಳು. ಜನರ ಗದ್ದಲ ಕ್ಷಣ ಹೊತ್ತು ನಿಂತಿತು. ಭುಜಂಗೇಶ ರಾಯರು ಮಗಳತ್ತ ಧಾವಿಸಿದರು. ಕಿರಣ ಸಾವರಿಸಿಕೊಂಡಿದ್ದ.

'ಏನಾಯ್ತು, ಮೇನಕಾ' ಮುದ್ದಿನ ಮಗಳಿಗೆ ಏನಾಯಿತೋ ಅನ್ನುವ ಭಯದಿಂದ ಕಂಗಾಲಾದವರು ಕಿರಣನನ್ನು ಗಮನಿಸಲಿಲ್ಲ.

ಮೇನಕಾ ಎಚ್ಚೆತ್ತುಕೊಂಡಳು. ಮುಂದಕ್ಕೆ ಬಂದು ಕಿರಣನನ್ನು ಗಟ್ಟಿಯಾಗಿ ಹಿಡಿದುಕೊಂಡಳು. ಕಣ್ಣುಗಳು ಮಂಜಾದವು.

'ಕ್ಷಮಿಸು ಕಿರಣ. ನನ್ನ ತಾಳ್ಮೆ ಪರೀಕ್ಷಿಸ್ದೆ ನೀನು... ಸ್ಸಾರಿ... ಸ್ಸಾರಿ...' ತಪ್ಪಿನ ಅರಿವಾಗಿ ಕ್ಷಮಾಪಣೆ ಕೇಳಿದಳು.

ಭುಜಂಗೇಶ ರಾಯರು ಕಿರಣನನ್ನು ನೋಡುತ್ತಲೇ ಸಿಟ್ಟನ್ನು ನಿಗ್ರಹಿಸಿಕೊಂಡಂತೆ ಉಗುಳು ನುಂಗಿಕೊಂಡರು.

'ಡ್ಯಾಡಿ, ಅನ್ಯಾಯವಾಗಿ ಅವನನ್ನು ದೂಡಿ ಬಿಟ್ಟೆ' ಅಪರಾಧಿ ಭಾವನೆಯಿತ್ತು ಮಾತಿನಲ್ಲಿ. ಕಿರಣನತ್ತ ಓರೆ ನೋಟ ಬೀರಿದರು. ನೆರೆದಿದ್ದ ಜನ ದೂರ ಸರಿದರು.

ಕಿರಣ ಸಂಪೂರ್ಣ ಎಚ್ಚೆತ್ತುಕೊಂಡವನು ಮೇನಕಾಳ ಕೈಯನ್ನು ಹಿಡಿದಂತೆ ಹಜಾರಕ್ಕೆ ಬಂದ.

ಕಿಲಕಿಲ ನಗುವಿನೊಂದಿಗೆ ಮೇನಕಾಳ ಗೆಳತಿಯರ ದಿಂಡು ಹೂವಿನ ಬುಕ್ಕೆಯ ಜೊತೆಗೆ ಹಾಜರಾಯಿತು.

'ಹ್ಯಾಪಿ ರಿಟರ್ನ್ಸ್ ಆಫ್ ದ ಡೇ' ಒಕ್ಕೊರಲಿನಿಂದ ಅಂದಾಗ ಗೋಡೆಯ ಪಕ್ಕದ ಮೇಜಿನಲ್ಲಿ ಜೋಡಿಸಿಟ್ಟಿದ್ದ ಕೇಕ್ ಮೇಲಿದ್ದ ಮೊಂಬತ್ತಿಯ ದೀಪ ತನ್ನ ಅಸ್ತಿತ್ವವನ್ನು ತೋರಿಸಿತು. ಕಿರಣ ಮುಗುಳ್ನಗುತ್ತಾ ಕಿರಣಳನ್ನು ಕೇಕ್ ಬಳಿಗೆ ಕರೆದೊಯ್ದ.

ಎಲ್ಲರ ನೋಟ ಮೇನಕಾಳತ್ತ. ಮೊಂಬತ್ತಿಯ ದೀಪ ಆರಿಸಿ ಅಡುಗೆಯ ಚೂರಿಯನ್ನು ಕೇಕ್ ಮೇಲೆ ಆಡಿಸಿದಳು. 'ಹುಟ್ಟುಹಬ್ಬದ ಶುಭಾಶಯಗಳು' ಮೊಳಗಿದವು. ಮತ್ತೆ ಗುಲ್ಲು. ಹಾಡು, ಕರೆ, ಕೂಗು, ನರ್ತನ!

ಟ್ರೇನಲ್ಲಿ ಕೇಕ್‌ನ ತುಂಡುಗಳು. ತಂಪು ಪಾನೀಯದ ಗ್ಲಾಸುಗಳು ನಿಂತಿದ್ದವರತ್ತ ಸರಬರಾಜಾದವು. ಭುಜಂಗೇಶರಾಯರು ಮೇನಕಾಳ ಬಾಯಿಗೆ ಸಿಹಿಯಿಟ್ಟರು. ಕಿರಣ ಅಲ್ಲಿಯೇ ನಿಂತು ಚಪ್ಪಾಳೆ ತಟ್ಟಿದ.

ಮೇನಕಾ ಗೆಳತಿಯರ ಜೊತೆಗೆ ಬೆರೆತಳು. ಕಿರಣ ಮೆಲ್ಲನೆ ಅಲ್ಲಿಂದ ಹೊರಡಲನುವಾದ. ಭುಜಂಗೇಶರಾಯರ ಕಂಚಿನ ಕಂಠ ಅವನನ್ನು ತಡೆಯಿತು. ಹಿಂದಕ್ಕೆ ಹೊರಳಿದ.

'ಕಾಶಮ್ಮನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ತೀಯಾ?' ಕೋರಿಕೆಯಿರಲಿಲ್ಲ ದನಿಯಲ್ಲಿ, ಗಂಭೀರವಾಗಿತ್ತು. ಕಿರಣ ಬೆಪ್ಪು ಹಿಡಿದವರಂತೆ ಅವರನ್ನು ನೋಡಿದ. ಕಿರಿದಾದ ಕಣ್ಣುಗಳಿಗೆ ಕನ್ನಡಿಯ ಗಾಜಿನ ಚೌಕಟ್ಟು ಇನ್ನಷ್ಟು ಗಂಭೀರತೆಯನ್ನು ತೋರಿಸುತ್ತಿತ್ತು.

'ನನ್ನ ಪ್ರಶ್ನೆ ಅರ್ಥವಾಗಲಿಲ್ಲ ಅನ್ಸುತ್ತೆ. ಕಾಶಮ್ಮ ನಿನ್ನ ಜೊತೆ ಏನು ಕೇಳಿಕೊಂಡಿದ್ಲು?'

ನೇರವಾಗಿ ಮೂಡಿದ ಪ್ರಶ್ನೆಯಿಂದ ತಪ್ಪಿಸಿಕೊಳ್ಳುವಂತಿರಲಿಲ್ಲ.

'ನಿಮ್ಮ ಧ್ಯೇಯನೂ ಅದೇ ಅಲ್ವೇ?' ಮರು ಪ್ರಶ್ನೆ ಎಸೆದವನನ್ನು ಎವೆಯಿಕ್ಕದೆ ದಿಟ್ಟಿಸಿದರು. ಕಿರಣ ವಿಚಲಿತನಾಗದೆ ಆ ದೃಷ್ಟಿಯನ್ನು ನೇರವಾಗಿ ಎದುರಿಸಿದ. ಯುವ ರಕ್ತ ಎಲ್ಲದಕ್ಕೂ ಸೈ ಅನಿಸಿತು. ಅರೆಕ್ಷಣ ಗಂಭೀರ ಮುಖ ಸಡಿಲಗೊಂಡು ಮೆಚ್ಚುಗೆಯ ನೋಟ ಹೊರ ಹೊಮ್ಮಿತು. ಅದು ಕ್ಷಣಿಕ ಮಾತ್ರವಾಗಿತ್ತು. ಮತ್ತೆ ಗಂಭೀರತೆ ಮೂಡಿತು.

'ನಿನ್ನನ್ನು ಇಲ್ಲಿಗೆ ಬರಬಾರದೂಂತ ನಾನು ಎಚ್ಚರಿಸಿದ್ದೆ. ಏನಾದರೊಂದು ನೆಪ ಹೂಡಿಕೊಂಡು ಬರೋದನ್ನ ನೀನು ನಿಲ್ಸೋದಿಲ್ಲ. ಹಾಗಾದ್ರೆ, ನೀನು ಕೊಟ್ಟ ಮಾತು ಉಳಿಸಿಕೊಂಡ ಹಾಗಾಗೋಲ್ಲ' ಮತ್ತಷ್ಟು ಎಚ್ಚರಿಕೆಯ ಗಂಟೆಯನ್ನು ಬಾರಿಸಿದಂತಿತು ಮಾತು.

'ನನ್ನ ತನಿಖೆಗೆ ಅವಶ್ಯಂತ ತೋರಿದ್ರೆ ಯಾವ ಸಮಯಕ್ಕಾದರೂ ಬರೋ ಸ್ವಾತಂತ್ರ್ಯ ಕೊಟ್ಟೋರು ನೀವೆ. ಈಗ ಅದನ್ನ ಹಿಂತೆಗೆಯೋದಾದ್ರೆ ನನ್ನ ಕೆಲಸ ಮುಂದುವರಿಸೋದು ಕಷ್ಟ'.

ಭುಜಂಗೇಶರಾಯರು ಸಮಾಧಾನದ ಮಾತಿಗಿಳಿದರು.

'ನಿನ್ನ ಇಲ್ಲಿ ಯಾರೂ ಅಡ್ಡಿಪಡಿಸೋದಿಲ್ಲ. ಆದ್ರೆ ಇಲ್ಲಿರೋ ವ್ಯಕ್ತಿಗಳಿಗೆ ಅದರಿಂದ ತೊಂದ್ರೆ ಆಗ್ಬಾರ್ದು. ಆ ರೀತಿ ನೀನು ನಡ್ಕೊಳ್ಳೋದಾದ್ರೆ ನೀನು ದಿನಾ ಬರ್ತಾ ಇರು' ಕಿರಣ ಅವರ ಮಾತಿನ ಹೊಡೆತಕ್ಕೆ ಸಿಕ್ಕಿದವನೆ ನಿರುತ್ತರನಾದ. ತನ್ನ ಬರುವಿಕೆಯಿಂದ ಯಾರಿಗೆ ತೊಂದರೆ? ಮಾನಸಿಕವಾಗಿ ನೊಂದಿರೋ ಕಾಶಮ್ಮನಿಗೆ? ತನ್ನನ್ನು ಅಗಾಧವಾಗಿ ಪ್ರೀತಿಸೋ ಮೇನಕಾಗೆ? ಫಾರ್ಮ್‌ನ ಬೆಳೆಗಳ ಬಗ್ಗೆ ಅಲೆದಾಡೋ ಭುಜಂಗೇಶರಾಯರಿಗೆ? ಅವರ ಮಾತುಗಳು ಕಿರಣನನ್ನು ಆಲೋಚನೆಗೆ ಹಚ್ಚಿತ್ತು. ಕಿರಣ ಯೋಚನೆಯ ಸುಳಿಯಲ್ಲಿ ಮುಳುಗಿರುವಂತೆ ಭುಜಂಗೇಶರಾಯರು ಅಲ್ಲಿಂದ ನಿರ್ಗಮಿಸಿದಂತಿತ್ತು!

***

**(ಸಶೇಷ)**